# ಆರಾಮಾಸನ!













ಕುರ್ಚಿಯಲ್ಲಿ ಅದೆಷ್ಟು ವೈವಿಧ್ಯ! ಮರದಿಂದ ಮಾಡಿದ್ದು, ಕೇನ್‌ನಿಂದ ತಯಾರಿಸಿದ್ದು, ಮೆಟಲ್–ಕಬ್ಬಿಣದಿಂದ ಮಾಡಿದ್ದು.. ಹೀಗೆ. ಆದರೆ ಇವುಗಳ್ಯಾವುದೂ ನೈಸರ್ಗಿಕ ಆರಾಮ ಆಸನಕ್ಕೆ ಸರಿಸಾಟಿಯಾಗಲಾರದು. ಚಿತ್ರದಲ್ಲಿರುವುದು ಅಪ್ಪಟ ನೈಸರ್ಗಿಕ ಆಸನ. ಇದಕ್ಕೆ ಯಾವುದೇ ನಟ್ ಬೋಲ್ಟ್ ಆಗಲಿ, ಬೇರೆ ಮರದ ತುಂಡಾಗಲಿ, ವಿಶೇಷ ಕೆತ್ತನೆಯಾಗಲಿ ಇಲ್ಲ. ಪ್ರಕೃತಿಯಲ್ಲಿ ಸಿಗುವ ಮರವನ್ನೇ ಕುಳಿತುಕೊಳ್ಳಲು ಅನುಕೂಲವಾಗುಷ್ಟರ ಮಟ್ಟಿಗೆ ಅಲ್ಪ ಬದಲಾವಣೆ ಮಾಡಿ ಈ ಆಸನಗಳನ್ನು ತಯಾರಿಸಲಾಗಿದೆ. ಮರದ ಬೊಡ್ಡೆಗಳಿಂದ ಕಣ್ಸೆಳೆಯುವ ಕಲಾಕೃತಿ ಮಾಡುವುದನ್ನು ನೋಡಿದ್ದೇವೆ. ಆದರೆ ಯಾವುದೇ ಕೃತಕ ಪರಿಕರ ಬಳಸದೆ ಇದ್ದ ಮರವನ್ನು ಹಾಗೆಯೇ ಮಾರ್ಪಾಡು ಮಾಡಿ ಸುಂದರ ಕುರ್ಚಿ ನಿರ್ಮಿಸಿದ ಈ ಬಡಗಿಯ ಕೌಶಲವನ್ನು ಮೆಚ್ಚಲೇ ಬೇಕು. ಮರದ ರೆಂಬೆಗಳಿಂದ, ಬೇರಿನಿಂದ ಮಾಡಿದ ಈ ಕುರ್ಚಿ ನಿಜಕ್ಕೂ ಆಕರ್ಷಕವಾಗಿದೆ. ವಿಶ್ವದ ಹೆಸರಾಂತ ಕಾಷ್ಟ ಕಲಾವಿದರಾದ ಆರ್ಥರ್ ವೀಚ್ಯುಲ, ಪೀಟರ್ ಕುಕ್, ಬೆಕ್ಕಿ ನಾರ್ಥೆ, ರಿಚರ್ಡ್ ರೀಮ್ಸ್ ಮುಂತಾದವರ ತಂಡ ಈ 'ಆರಾಮಾಸನ'ದ ರೂವಾರಿಗಳು.

■ ಅವನೀಶ್